**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.5 / ಚಾ.ಸಾ.1)

ತಾಃ 30-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆರ್.ವಿ. ರಮೇಶ್ |
| ತಂದೆಯ ಹೆಸರು | ಃ | ವೆಂಕಟರಮಣಪ್ಪ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಚಿಕ್ಕೊಂಡಹಳ್ಳಿ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು. |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಹೆಚ್.ಕ್ರಾಸ್ ನಿಂದ ಕೋಲಾರ ರಸ್ತೆಯ ಚಿಕ್ಕೊಂಡಹಳ್ಳಿ ಗ್ರಾಮದ ಕಾನಿಷ್ ಮಾರೆ ನಂ.146 ರಲ್ಲಿ 30 ಗುಂಟೆ ಜಮೀನಿನಲ್ಲಿ 24 ಸೈಟುಗಳನ್ನು ಮಾಡಿದ್ದು, ಒಂದು ಸೈಟ್‌ನಲ್ಲಿ ನಾನಿದ್ದು ಉಳಿದ ಸೈಟುಗಳಲ್ಲಿ ವ್ಯವಸಾಯ ಮಾಡಿಕೊಂಡು ಇದ್ದೇನೆ. ಅದರಲ್ಲಿ ಒಂದು ಸಣ್ಣದೊಂದು ಮಿಲ್ಟ್ರಿ ಹೋಟೆಲ್ ನಡೆಸುತ್ತಿದ್ದೆವು. ಸದರಿ ಹೋಟೆಲ್ ಅನ್ನು ನಾನು ನನ್ನ ಹೆಂಡತಿ-ಮೃತ ಕವಿತಾ ಕೂಡಿಕೊಂಡು ಮಿಲ್ಟ್ರಿ ಡಾಬಾವನ್ನು 2011 ರಿಂದ ನಡೆಸುತ್ತಿದ್ದೆವು. ನನಗೆ ಇಬ್ಬರು ಮಕ್ಕಳು. ದೊಡ್ಡ ಮಗನ ಹೆಸರು ನವನೀತ್ ಎರಡನೇ ಮಗಳ ಹೆಸರು ಲಯಾ ಇರುತ್ತದೆ. ನಾನು ನನ್ನ ಹೆಂಡತಿ ಮತ್ತು ಮಕ್ಕಳು ಸದರಿ ಹೋಟೆಲ್‌ನಲ್ಲಿ ವಾಸವಿದ್ದೆವು. ಹೋಟೆಲ್ ಹಾಗೂ ಸೈಟ್ ಇರುವ ಸ್ಥಳವು ನನ್ನ ಮಾವ ಮುನಿಮಲ್ಲಪ್ಪನ ಹೆಸರಿನಲ್ಲಿ ಇತ್ತು, ಅವರು 2015 ರಲ್ಲಿ ಕ್ಯಾನ್ಸರ್ ರೋಗದಿಂದ ಮೃತಪಟ್ಟಿರುತ್ತಾರೆ.

ಅವರಿಗೆ ಕ್ಯಾನ್ಸರ್ಲ್ ಕಾಯಿಲೆ ಇದ್ದುದರಿಂದ ಅವರಿಗೆ ಚಿಕಿತ್ಸೆ ಕೊಡಿಸಲು 1ನೇ ಆರೋಪಿ-ನಾರಾಯಣಪ್ಪನಿಂದ 6 ಲಕ್ಷ ರೂಪಾಯಿಗಳನ್ನು ಸಾಲವಾಗಿ ಹೊಸಕೋಟೆಯ ಮಂಜಪ್ಪ , ದಿಣ್ಣೆನಗರದ ವೆಂಕಟೇಶಪ್ಪನ ಮಧ್ಯಸ್ಥಿಕೆಯಲ್ಲಿ ಪಡೆದಿದ್ದೆನು. ಸಾಲ ಪಡೆದಿದ್ದಕ್ಕೆ ಸ್ವತ್ತಿನಲ್ಲಿಯ ಸೈಟ್ ನಂಬರ್ ಒಂದು-ವಿಸ್ತೀರ್ಣ 40 ೣ 40 ಅಡಿ ವಿಸ್ತೀರ್ಣದ ನಿವೇಶವನ್ನು ಕ್ರಯದ ಜಂಟಿ ಕರಾರು ಪತ್ರವನ್ನು 1ನೇ ಆರೋಪಿ ಹಾಗೂ ಆತನ ಆಪ್ತರಾದ ಮಹಿಳೆಯ ಹೆಸರಿನಲ್ಲಿ ಮೃತ ಮಾವನಾದ ಮುನಿಮಲ್ಲಪ್ಪನು ನೊಂದು ಮಾಡಿಕೊಟ್ಟಿದ್ದರು. ಕಾಯಿಲೆ ಜಾಸ್ತಿಯಾಗಿದ್ದರಿಂದ ಮತ್ತೆ ಹಣದ ಅವಶ್ಯಕತೆ ಬಂದಿತು ಮಧ್ಯಸ್ಥರ ಮುಖಾಂತರ 1ನೇ ಆರೋಪಿಯನ್ನು ಮತ್ತಷ್ಟು ಹಣ ನೀಡಲು ಕೇಳಿದ್ದೆವು. 1ನೇ ಆರೋಪಿಯು ಸೈಟ್ ನಂಬರ್ 1ರ ಜೊತೆಗೆ ಪೂರ್ಣ 30 ಗುಂಟೆ ಜಮೀನಿನಲ್ಲಿ ಸೈಟ್ ನಂಬರ್. 7 ಮತ್ತು 8 ಅನ್ನು ಬಿಟ್ಟು ಸಂಪೂರ್ಣ ಜಮೀನನ್ನು ನೊಂದು ಮಾಡಿಸಿ ಕೊಟ್ಟರೆ ಹಣ ನೀಡುತ್ತೇನೆ ಎಂದು ಹೇಳಿದ್ದರು ಮತ್ತು ತನ್ನ ಹೆಸರಿನಲ್ಲಿರುವ ದೇವಶೆಟ್ಟಿಹಳ್ಳಿ ಗ್ರಾಮದ ಎರಡು ಎಕರೆ ವ್ಯವಸಾಯದ ಜಮೀನನ್ನು ಹಾಗೂ ಚಿಕಿತ್ಸೆಗಾಗಿ 5 ರಿಂದ 6 ಲಕ್ಷ ಹಣ ಕೊಡುತ್ತೇನೆ ಹಾಗೂ ಸದರಿ ಎರಡು ಎಕರೆ ಜಮೀನನ್ನು ನನ್ನ ಹೆಸರಿನಲ್ಲಿ ಮಾಡಿಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದನು. ಮೃತ ಮುನಿಮಲ್ಲಪ್ಪನನ್ನು 1ನೇ ಆರೋಪಿಯ ಸಹೋದರ ವೈದ್ಯರಿದ್ದು ಆತನ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದರೆ ಇನ್ನು 2 ರಿಂದ 3 ಲಕ್ಷ ಹಣವನ್ನು ಬೇಕಾದರೆ ನೀಡುತ್ತೇನೆ ಎಂದು ಒಪ್ಪಿಕೊಂಡಿದ್ದನು. ಅದರಂತೆ ಮುನಿಮಲ್ಲಪ್ಪನನ್ನು ಕರೆದುಕೊಂಡು 1ನೇ ಆರೋಪಿಯ ಹೆಸರಿನಲ್ಲಿ 30 ಗುಂಟೆ ಕಾನಿಷ್ ಮಾರೆ ನಂ.146 ಅನ್ನು ದಿನಾಂಕ 17-07-2015 ರಂದು ನೊಂದು ಮಾಡಿಕೊಟ್ಟನು. ತನ್ನ ಹೆಸರಿನಲ್ಲಿರುವ ಎರಡು ಎಕರೆ ಜಮೀನನ್ನು ನನ್ನ ಹೆಸರಿಗೆ ಮೃತಮಲ್ಲಪ್ಪ ತೀರಿಹೋದ ನಂತರ ನೊಂದು ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದನು. ಸುಮಾರು 1 ವರ್ಷದ ನಂತರ ನಂದಗುಡಿ ಪೋಲಿಸರು ಅರ್ಜಿ ವಿಚಾರಣೆ ಇದೆ ಎಂದು, ಹೆಚ್ಚುವರಿ ಪೋಲಿಸ್ ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು ಬರಲು ಹೇಳಿದ್ದಾರೆ ಎಂದು ನೋಟಿಸ್ ಅನ್ನು ನೀಡಿದ್ದರು, ನಾನು

ಹಾಗೂ ಮೃತ ನನ್ನ ಹೆಂಡತಿ ಕವಿತಾಳು ಕೂಡಿಕೊಂಡು ಹೋಗಿದ್ದೆವು. ಕಚೇರಿಯಲ್ಲಿ 1ನೇ ಆರೋಪಿಯು ನಮ್ಮ ಮೇಲೆ ದೂರನ್ನು ನೀಡಿದ್ದಾನೆ ಎಂದು ಗೊತ್ತಾಯಿತು ಮತ್ತು ನಾನು ಮಚ್ಚಿನಿಂದ 1ನೇ ಆರೋಪಿಗೆ ಹೊಡೆಯಲು ಹೋಗಿದ್ದೆನು ಎಂದು ಆರೋಪ ನೀಡಿದ್ದಾನೆ ಎಂದು ಗೊತ್ತಾಯಿತು, ವಿಚಾರಣೆ ನಡೆಯಲಿ ಎಂದು ಕೇಳಿಕೊಂಡಿದ್ದನು. 10 ದಿನಗಳಲ್ಲಿ ಸಾಕ್ಷಿಗಳನ್ನು ಹಾಜರುಪಡಿಸಲು ಹೇಳಿದ್ದರು. 10 ದಿನಗಳ ನಂತರ ನಾನು, ಮೃತ ಹೆಂಡತಿ, ವಕೀಲರು , 1ನೇ ಆರೋಪಿಯಿಂದ ಹಣ ಪಡೆಯಲು ಮಧ್ಯಸ್ಥಿಗಾರರಾದ ಮಂಜುನಾಥ, ವೆಂಕಟೇಶಪ್ಪ ಕೂಡಿಕೊಂಡು ಹೋಗಿದ್ದೆವು. ಸದರಿ ದಿನದಂದು ಕಚೇರಿಗೆ ಹೋಗಿದ್ದೆವು. ಕಚೇರಿಯಲ್ಲಿ ಸಾಹೇಬರು ಇರಲಿಲ್ಲ , ಸಾಯಂಕಾಲದವರೊ ಕಾದಿದ್ದೆವು, ಆ ಸಮಯದಲ್ಲಿ ನನ್ನ ಭಾವ ಮೈದುನನಾದ ಚಾಸಾ-8 ರವರು ಫೋನ್ ಮಾಡಿ ಆರೋಪಿತರಾದ 1, 2, 3, 4 ಹಾಗೂ ಇನ್ನು ನಾಲ್ಕು ಜನರೊಂದಿಗೆ ನಾವು ವಾಸವಾಗಿದ್ದ ಹೋಟೆಲ್‌ಗೆ ಹೋಗಿ ಸಾಯಂಕಾಲ 6-00 ಗಂಟೆ ಸಮಯದಲ್ಲಿ ಹೋಟೆಲ್‌ನಲ್ಲಿ ಇದ್ದ 3 ಫ್ರಿಡ್ಜ್, ಟಿ.ವಿ. ಮತ್ತು ಟಿ.ವಿ. ಸ್ಟಾಂಡ್, ಡಿ.ವಿ.ಡಿ. ಡಬಲ್ ಸ್ಟೌವ್‌ಗಳನ್ನು ಟೆಂಪೋದಲ್ಲಿ ತುಂಬಿಕೊಂಡು ಹೊರಟ್ಟಿದ್ದರು, ಹೋಟೆಲ್‌ನಲ್ಲಿ ಇದ್ದ ಅಳವಡಿಸಿದ್ದ 8 ಸಿ.ಸಿ. ಕ್ಯಾಮರಗಳಲ್ಲಿ 4 ಕ್ಯಾಮರಗಳನ್ನು ಹೊಡೆದಿದ್ದರು, 4 ಕ್ಯಾಮರಗಳು ಹಾಗೇ ಇದ್ದವು ಎಂದು ಹೇಳಿದ್ದರು. ಆ ಸಮಯದಲ್ಲಿ ಹೋಟೆಲ್‌ನಲ್ಲಿ ಚಾಸಾ-8, 2 ರವರು ಕೆಲಸ ಮಾಡಿಕೊಂಡು ಇದ್ದರು, ಅವರಿಗೆ ಹೊಡೆದು ಸ್ಥಳವನ್ನು ಖಾಲಿ ಮಾಡಿಕೊಂಡು ಹೋಗಿ ಎಂದು ಹೆದರಿಸಿದ್ದರು. ನಾವು ಸ್ಥಳಕ್ಕೆ ಹೋದಾಗ ಸಾಯಂಕಾಲ 6-00 ಗಂಟೆಯಾಗಿತ್ತು , ಆ ಸಮಯದಲ್ಲಿ 1, 2, 3, 4ನೇ ಆರೋಪಿತರು ಸ್ಥಳದಲ್ಲಿ ಇದ್ದರು. ನಾನು ಕಾರಿನಲ್ಲಿ ನನ್ನ ಹೆಂಡತಿ-ಮೃತ ಕವಿತಾ, ಚಿಕ್ಕಅತ್ತೆಯಾದ ಚಾಸಾ-6 ರವರು ಇದ್ದರು. ಕಾರನ್ನು ನಮ್ಮ ಡಾಬಾದ ಮುಂದೆ ನಿಲ್ಲಿಸಿದೆನು, ನನ್ನ ಹೆಂಡತಿ ಮೃತ ಕವಿತಾ ಕಾರಿನಿಂದ ಇಳಿದು ಮುಂದೆ ಹೋಗಿ 1ನೇ ಆರೋಪಿಯ ಕೊರಳ ಪಟ್ಟಿಯನ್ನು ಹಿಡಿದು ಈಗಾಗಲೇ ಜಮೀನನ್ನು ತನ್ನ ಹೆಸರಿನಲ್ಲಿ ಮಾಡಿಕೊಂಡು ನಮಗೆ ಕೊಡಬೇಕಾದ ಎರಡು ಎಕರೆ ಜಮೀನನ್ನು ನೊಂದು ಮಾಡದೆ

ಲಪಟಾಯಿಸಿದ್ದು ಮತ್ತೆ ಈ ಜಮೀನಿಂದ ನಮ್ಮನ್ನು ಖಾಲಿ ಮಾಡಿಸುತ್ತಿದ್ದೀಯ ಎಂದು ಕೇಳಿದ್ದಳು. ಮಧುಕುಮಾರನ ಕೈಯಲ್ಲಿ ಬಿಳಿ ಬಣ್ಣದ ಪೇಪರ್‌ನಲ್ಲಿ ಚಾಕುವನ್ನು ಇಟ್ಟುಕೊಂಡಿದ್ದನು. ನಾನು ನನ್ನ ಹೆಂಡತಿ ಹಾಗೂ 1ನೇ ಆರೋಪಿಯನ್ನು ಬಿಡಿಸಲು ಹೋದಾಗ 1ನೇ ಆರೋಪಿಯು 2ನೇ ಆರೋಪಿಯ ಕೈಯಲ್ಲಿ ಇದ್ದ ಚಾಕುವನ್ನು ತೆಗೆದುಕೊಂಡು ಇಬ್ಬರನ್ನು ಮುಗಿಸಿ ಬಿಡುತ್ತೇನೆ ಜಮೀನು ತನ್ನದು ಆಗುತ್ತದೆ ಎಂದು ನನ್ನ ಹೆಂಡತಿಗೆ ಬಲಭಾಗದ ಬಕ್ಕೆಗೆ ಇರಿದನು, ತಕ್ಷಣ ಮೃತ ಕವಿತಾ ಬಕ್ಕೆಯಿಂದ ಕರುಳುಗಳು ಹೊರಗೆ ಬಂದವು. ನಮ್ಮ ಚಿಕ್ಕಅತ್ತೆ-ಚಾಸಾ-6 ಅಯ್ಯೋ ಎಂದು ಚೀಟಿ ಮೃತ ಕವಿತಾಳನ್ನು ಹಿಡಿದುಕೊಂಡಳು. ನನಗೆ 2ನೇ ಆರೋಪಿಯ ಕೈಯಲ್ಲಿ ಇದ್ದ ದೊಣ್ಣೆಯಿಂದ ಮತ್ತು 3ನೇ ಆರೋಪಿಯ ಕೈಯಲ್ಲಿ ಇದ್ದ ಮಚ್ಚಿನಿಂದ ಹೊಡೆಯಲು ಬಂದರು. ನನ್ನ ಮೃತ ಹೆಂಡತಿ ಕೆಳಗೆ ಬಿದ್ದಳು ಅವಳನ್ನು ಕೈಯಲ್ಲಿ ಹಿಡಿಯುವಷ್ಟರಲ್ಲಿ 1ನೇ ಆರೋಪಿಯು ಚಾಕುವಿನಿಂದ ನನ್ನ ಎಡಗಡೆಯ ಭುಜದ ಹಿಂಭಾಗ ಇರಿದನು. ಅಷ್ಟರಲ್ಲಿ ಹೆಚ್ ಕ್ರಾಸ್‌ನಿಂದ ಪೋಲಿಸರಾದ ಶಿವಕುಮಾರ್ ಎನ್ನುವರು ಬಂದರು. ಅವರು ಬಂದಿದ್ದನು ನೋಡಿ 1, 2, 3, 4ನೇ ಆರೋಪಿತರು ಹಾಗೂ ಅವರ ಜೊತೆಗಿದ್ದ 4 ಜನ ಆರೋಪಿತರು ಓಡಿ ಹೋದರು. ಒಟ್ಟು 8 ಜನ ಇದ್ದರು, 8 ಜನರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1, 3, 5ನೇ ಆರೋಪಿತರನ್ನು ನೋಡಿ ಗುರುತಿಸಿದ್ದು ಸದರಿ ಘಟನಾ ದಿನದಂದು ಅವರೇ ಹಾಜರಿದ್ದರು. ಉಳಿದ ಆರೋಪಿತರಾದ 2, 4, 6 ನೇ ಆರೋಪಿತರು ಗೈರು ಹಾಜರಿದ್ದು ಆರೋಪಿತರ ಪರ ವಕೀಲರು ಅವರ ಗುರುತಿಸುವಿಕೆಗಾಗಿ ತಕರಾರು ಇಲ್ಲ ಎಂದು ಹೇಳುತ್ತಾರೆ ಮತ್ತು ಈ ದಿನದ ಗೈರು ಹಾಜರಿಯನ್ನು ಮನ್ನಿಸಲು ಅರ್ಜಿ ಸಲ್ಲಿಸಿರುತ್ತಾರೆ.

ನಂತರ ಗಾಯಗೊಂಡ ನಾನು, ಮೃತ ಪತ್ನಿ ಶಿಡ್ಲಘಟ್ಟದ ರಸ್ತೆಯಲ್ಲಿರುವ ಸೃಷ್ಟಿ ಆಸ್ಪತ್ರೆಗೆ ಚಾಸಾ-8 ರವರು ನಮ್ಮ ಕಾರಿನಲ್ಲಿ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಹಾಗೂ ಸೌಕರ್ಯ ಇರುವ ಆಸ್ಪತ್ರೆಯಾದ ಹೆಬ್ಬಾದ ಬ್ಯಾಪಿಟ್ಸ್ ಆಸ್ಪತ್ರೆಗೆ ಹೋಗಲು

ಹೇಳಿದರು ಮತ್ತು ಅಸ್ಪತ್ರೆಯವರೇ ಆಂಬುಲೆನ್ಸ್ ವ್ಯವಸ್ಥೆ ಮಾಡಿದರು. ಸದರಿ ಆಸ್ಪತ್ರೆಯಿಂದ ವರ್ತೂರಿನಲ್ಲಿರುವ ಸೂಪರ್ ಸ್ಪೆಷಾಲಿಟಿ ಅಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಆಸ್ಪತ್ರೆ ಬೇಡ ಎಂದು ವೈಟ್ ಫೀಲ್ಡ್‌ನಲ್ಲಿರುವ ಏಶಿಯನ್ ಕೊಲಂಬಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಆಸ್ಪತ್ರೆಯಲ್ಲಿ ದಾಖಲಾದೆವು. ಮರುದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 18-11-2017 ರಂದು ಸಾಯಂಕಾಲ 5-30 ರಿಂದ 6-00 ಗಂಟೆ ಸಮಯದಲ್ಲಿ ತೀರಿಕೊಂಡಳು.

ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ನಂದಗುಡಿ ಪೋಲಿಸರು ಬಂದಿದ್ದರು. ನೋವಿನಲ್ಲೇ ಪೋಲಿಸರಿಗೆ ವೈದ್ಯರ ಮುಂದೆ ಹೇಳಿಕೆ ನೀಡಿದ್ದೇನೆ. ಸಾಕ್ಷಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಾನು ಹೇಳಿಕೆ ನೀಡಿದ ಮರುದಿನ ನನ್ನ ಹೆಂಡತಿ ತೀರಿಕೊಂಡಿದ್ದಾಳೆ. ಅವಳು ಆಸ್ಪತ್ರೆಗೆ ದಾಖಲಿಸುವಾಗ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆಸ್ಪತ್ರೆಯಲ್ಲಿ ಹಣ ಕಟ್ಟಲು ಯಾರು ಇರದೇ ಇದ್ದುದರಿಂದ ನಾನು ಡಿಸ್‌ಚಾರ್ಜ್ ಆಗಿದ್ದೆನು ಮತ್ತು ಚಿಕಿತ್ಸೆಯನ್ನು ಪಡೆದುಕೊಳ್ಳಲು ಸೂಚಿಸಿದ್ದರು. ನಾನು ಚಾಕುವನ್ನು ಹಾಗೂ ಫ್ರಿಡ್ಜ್ , ಟಿ.ವಿ. ಟಿ.ವಿ. ಸ್ಟಾಂಡ್, ಸ್ಟೌವ್ ಹಾಗೂ ಇತರೆ ಸಾಮಾನುಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರ್‌ನಲ್ಲಿ ಒಂದು ಚಾಕು ಇದ್ದು ಸಾಕ್ಷಿ ನೋಡಿ ಸದರಿ ಚಾಕು ಆ ದಿನದಂದು ಇರಲಿಲ್ಲ ಸುಮಾರು ಒಂದು ಅಡಿ ಉದ್ದದ ಚಾಕು ಇತ್ತು ಈ ಚಾಕು ಅಲ್ಲ ಎಂದು ಹೇಳುತ್ತಾರೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಇನ್ನೊಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು.

ಸದರಿ ಕವರ್‌ನಲ್ಲಿ ಒಂದು ಚಾಕು ಇದ್ದು ಸಾಕ್ಷಿ ನೋಡಿ ಸದರಿ ಚಾಕು ಆ ದಿನದಂದು ಇರಲಿಲ್ಲ ಸುಮಾರು ಒಂದು ಅಡಿ ಉದ್ದದ ಚಾಕು ಇತ್ತು, ಈ ಚಾಕು ಅಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಫ್ರಿಡ್ಜ್‌ನ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಐ-ಕ್ರೀಮ್ ಫ್ರಿಡ್ಜ್ ಮತ್ತು ಟಿ.ವಿ.ಯ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಟಿ.ವಿ. ಸ್ಟಾಂಡ್ ಹಾಗೂ ಸ್ಟೌವ್ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಸದರಿ ದಿನದಂದು ನ್ಯಾಯಾಲಯದ ಮುಂದಿರುವ ಎರಡು ಸಿ.ಸಿ. ಕ್ಯಾಮರಗಳು ಒಡೆದಿದ್ದು ಅವುಗಳನ್ನು ಗುರುತಿಸಲು ಆರೋಪಿಪರ ವಕೀಲರು ಅವುಗಳನ್ನು ಸೀಲ್ ಮಾಡದೆ ತೆರೆದ ರೀತಿಯಲ್ಲಿ ಇದ್ದು ಗುರುತಿಸಲು ತಕರಾರು ಸಲ್ಲಿಸುತ್ತಿದ್ದಾರೆ. ಸದರಿಯವುಗಳನ್ನು ತಕರಾರಿಗೆ ಒಳಪಟ್ಟು ಅವುಗಳನ್ನು ಒಟ್ಟಾರೆಯಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಸದರಿ ದಿನದಂದು ನನ್ನ ಮೃತ ಹೆಂಡತಿ ಹುಟ್ಟಿದ್ದ ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರ್‌ನಲ್ಲಿ ಒಂದು ಸೀರೆ ಇದ್ದು ಸಾಕ್ಷಿ ನೋಡಿ ಸದರಿ ಸೀರೆಯು ತನ್ನ ಹೆಂಡತಿಗೆ ಸಂಬಂಧಿಸಿದ್ದು ಅಲ್ಲ ಎಂದು ಹೇಳುತ್ತಾರೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರ್‌ನಲ್ಲಿ ಒಂದು ಲಂಗ ಇದ್ದು ಸಾಕ್ಷಿ ನೋಡಿ ಗುರುತಿಸಿ ಸದರಿ ಲಂಗವು ತನ್ನ ಹೆಂಡತಿಯದು ಎಂದು ಹೇಳುತ್ತಾರೆ. ಸದರಿ ಲಂಗವನ್ನು

ಮುದ್ದೆಮಾಲು-2 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಕವರ್‌ನಲ್ಲಿರುವ ಸೀರೆಯನ್ನು ಪೂರ್ಣವಾಗಿ ತೆಗೆದು ನೋಡಿದಾಗ ತನ್ನ ಹೆಂಡತಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಸೀರೆಯನ್ನು ಮೊದಲು ಗುರುತಿಸಿರುವುದಿಲ್ಲ ಈಗ ಗುರುತಿಸಲು ಬರುವುದಿಲ್ಲ ಎಂದು ತಕರಾರು ಸಲ್ಲಿಸುತ್ತಿದ್ದಾರೆ. ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ಸೀರೆಯನ್ನು ಮುದ್ದೆಮಾಲು-3 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಇನ್ನೊಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರ್‌ನಲ್ಲಿ ಒಂದು ಶರ್ಟ್ ಇದ್ದು ಸಾಕ್ಷಿ ನೋಡಿ ಗುರುತಿಸಿ ಸದರಿ ಶರ್ಟ್ ತನ್ನದು ಎಂದು ಹೇಳುತ್ತಾರೆ. ಸದರಿ ಶರ್ಟ್ ಅನ್ನು ಮುದ್ದೆಮಾಲು-4 ಎಂದು ಗುರುತಿಸಲಾಯಿತು. ಮುದ್ದೆಮಾಲು-4 ಅನ್ನು ಘಟನೆಯ ಸಮಯದಲ್ಲಿ ಹಾಕಿಕೊಂಡ ಶರ್ಟ್ ಇತ್ತು ಎಂದು ಹೇಳುತ್ತಾರೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಇನ್ನೊಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿದ್ದನ್ನು ತೆರೆಯಲು ಅನುಮತಿ ಕೇಳುತ್ತಿದ್ದಾರೆ, ಆರೋಪಿತರ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ತೆರೆಯಲು ಅನುಮತಿ ನೀಡಲಾಯಿತು. ಸದರಿ ಕವರ್‌ನಲ್ಲಿ ಒಂದು ಬನಿಯನ್ ಇದ್ದು ಸಾಕ್ಷಿ ನೋಡಿ ಗುರುತಿಸಿ ಸದರಿ ಬನಿಯನ್ ತನ್ನದು ಎಂದು ಹೇಳುತ್ತಾರೆ. ಸದರಿ ಬನಿಯನ್ ಅನ್ನು ಮುದ್ದೆಮಾಲು-5 ಎಂದು ಗುರುತಿಸಲಾಯಿತು. ಮುದ್ದೆಮಾಲು 1 ರಿಂದ 5 ಅನ್ನು ಘಟನೆ ನಡೆದ ನಂತರ ಆಸ್ಪತ್ರೆಯಲ್ಲಿ ಪೋಲಿಸರು ಜಪ್ತುಪಡಿಸಿಕೊಂಡಿರುತ್ತಾರೆ. ಕರಾರು ಕ್ರಯ ಪತ್ರದ ಪ್ರತಿಯನ್ನು ಪೋಲಿಸರಿಗೆ ನೀಡಿದ್ದೇನೆ.

ಈ ಹಂತದಲ್ಲಿ ಡಿ.ವಿ.ಡಿ. ಹಾಗೂ ಹಾರ್ಡ್ ಡಿಸ್ಕ್ ಅನ್ನು ಎಫ್.ಎಸ್.ಎಲ್.ನಿಂದ ಹಿಂದಿರುಗಿಸಿರುವುದಿಲ್ಲ ಆದರೆ ವರದಿ ಬಂದಿರುತ್ತದೆ ಅದ್ದರಿಂದ ಸರ್ಕಾರಿ ಅಭಿಯೋಜಕರು

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶವನ್ನು ಕೇಳುತ್ತಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. /**

**(ಪ್ರಾ.ಸಾ.5 / ಚಾ.ಸಾ.-)**

ತಾಃ 18-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು :

ತಂದೆಯ ಹೆಸರು/ :
ಗಂಡನ ಹೆಸರು
ವಯಸ್ಸು : ವರ್ಷ
ಉದ್ಯೋಗ :
ವಾಸ ಸ್ಥಳ :

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

**(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

**(ಮೋಹನ ಬಾಡಗಂಡಿ)**
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.